
# ಪ್ರಾರ್ಥನೆ

## ಶ್ರೀ ಬುದ್ಧದೇವ ವಂದನಾ



**ಬದ್ಧ್ವಾ ಪದ್ಮಾಸನಂ ಯೋ ನಯನಯುಗಮಿದಂ ನ್ಯಸ್ಯ ನಾಸಾಗ್ರದೇಶೇ**
**ಧೃತ್ವಾ ಮೌನಂ ಚ ಶಾಂತೌ ಸಮರಸಮಿಲಿತೌ ಚಂದ್ರಸೂರ್ಯಾಖ್ಯವಾತೌ ।**
**ಪಶ್ಯನ್ನಂತರ್ವಿಶುದ್ಧಂ ಕಿಮಪಿ ಚ ಪರಮಂ ಜ್ಯೋತಿರಾಕಾರಹೀನಂ**
**ಸೌಖ್ಯಾಂಭೋಧೌ ನಿಮಗ್ನಃ ದಿಶತು ಭವತಾಂ ಜ್ಞಾನಬೋಧಂ ಬುಧೋऽಯಂ ॥**

ಪದ್ಮಾಸನದಲ್ಲಿ ಕುಳಿತು, ಎರಡೂ ಕಣ್ಣುಗಳನ್ನು ಮೂಗಿನ ತುದಿಯಲ್ಲಿ ಕೇಂದ್ರೀಕರಿಸಿ, ಚಂದ್ರ-ಸೂರ್ಯ ಎಂಬ (ಪ್ರಾಣ, ಅಪಾನ) ವಾಯುಗಳನ್ನು ಒಂದೇ ಸಮನಾಗಿ ಸಂಚರಿಸುವಂತೆ ಮಾಡಿ ಶಾಂತವಾಗಿರಿಸಿ, ಮೌನವನ್ನಾಧರಿಸಿರುವ; ಅಂತರಂಗದಲ್ಲಿ ಆಕಾರರಹಿತವಾದ ನಿರ್ಮಲ ಪರಮ ಜ್ಯೋತಿಯನ್ನು ಕಾಣುತ್ತಿರುವ, ಸುಖಸಾಗರದಲ್ಲಿ ಮುಳುಗಿರುವ, ಜ್ಞಾನಿಯಾದ ಈ ಬುದ್ಧದೇವನು ನಿಮಗೆ ಜ್ಞಾನಬೋಧೆಯನ್ನು ಉಂಟುಮಾಡಲಿ.

## ಶ್ರೀ ಶಂಕರಾಚಾರ್ಯ ವಂದನಾ



**ವೇದಾಂತಾರ್ಥವಿಭಾಸಕಾಯ ಗುರವೇ ಶಾಂತಾಯ ಸಂನ್ಯಾಸಿನೇ**
**ನಾನಾವಾದಿನಗೇಂದ್ರಸಂಘಪವಯೇ ಯೋಗೀಂದ್ರವಂದ್ಯಾಯ ಚ ।**
**ಮೋಹಧ್ವಾಂತದಿವಾಕರಾಯ ಭಗವತ್ಪಾದಾಭಿಧಾಂ ಬಿಭ್ರತೇ**
**ತಸ್ಮೈ ಭಾಷ್ಯಕೃತೇ ನಮೋऽಸ್ತು ಸತತಂ ಪೂರ್ಣಾಯ ಬೋಧಾತ್ಮನೇ ॥**

ವೇದಾಂತದ ಅರ್ಥವನ್ನು ತೋರಿಸಿಕೊಟ್ಟ, ಗುರುವಾಗಿರುವ, ಸಂನ್ಯಾಸಿಯಾದ, ಶಾಂತನಾಗಿರುವ, ಅನೇಕ ಬಗೆಯ ವಾದಿಗಳೆಂಬ ಪರ್ವತಕ್ಕೆ ವಜ್ರಾಯುಧನಾದ (ವಾದಿಗಳನ್ನು ಜಯಿಸಿದ), ಯೋಗೀಂದ್ರರಿಂದ ನಮಸ್ಕರಿಸಲ್ಪಡುವ, ಮೋಹವೆಂಬ ಕತ್ತಲಿಗೆ ಸೂರ್ಯನಾದ (ಇತರರ ಮೋಹವನ್ನು ದೂರಮಾಡಿದ), ಭಗವತ್ಪಾದ ಎಂಬ ಹೆಸರನ್ನು ಹೊಂದಿರುವ, (ಬ್ರಹ್ಮಸೂತ್ರಾದಿಗಳಿಗೆ) ಭಾಷ್ಯಗಳನ್ನು ರಚಿಸಿರುವ ಪೂರ್ಣಜ್ಞಾನ ಸ್ವರೂಪಿಯಾದ ಆಚಾರ್ಯರನ್ನು ಸದಾ ನಮಸ್ಕರಿಸುತ್ತೇನೆ.

# ಸೂಕ್ತಿಪ್ರಭ

## ದಿವ್ಯಸೂಕ್ತಿಗಳು

ದಯೆಯಿಂದ ಕೂಡಿದ ಕರ್ಮಗಳನ್ನು ನಿರಂತರ ಮಾಡುವುದರಿಂದ ಮಾತ್ರ ಅಮರತ್ವವನ್ನು ಹೊಂದಬಹುದು. ಅನುಕಂಪ, ಸೇವೆ ಇವುಗಳಿಂದ ಪರಿಪೂರ್ಣತೆಯನ್ನು ಸಾಧಿಸಬಹುದು.

ಎಲ್ಲ ಜೀವಿಗಳ ಮೇಲೆ ದಯೆ — ಇದೇ ನಿಜವಾದ ಧರ್ಮ. ಇತರ ಜೀವಿಗಳ ಬಗ್ಗೆ ನಿನ್ನ ಹೃದಯದಲ್ಲಿ ಅಪರಿಮಿತ ಸದ್ಭಾವವನ್ನು ಬೆಳೆಸು.

ನಿನ್ನ ದುಃಖಕ್ಕೆ ಕಾರಣ ಏನೇ ಆಗಿರಲಿ, ಇತರರನ್ನು ಮಾತ್ರ ನೋಯಿಸಬೇಡ.

ಮಲ್ಲಿಗೆ ಹೂ ತನ್ನ ಬಾಡಿದ ಹೂಗಳನ್ನು ಉದುರಿಸುವಂತೆ, ಓ ಭಿಕ್ಷುಗಳೆ, ನೀವು ನಿಮ್ಮಲ್ಲಿರುವ ರಾಗ, ದ್ವೇಷಗಳನ್ನು ಸಂಪೂರ್ಣ ತ್ಯಜಿಸಬೇಕು.

— ಭಗವಾನ್ ಬುದ್ಧ

ಶ್ರದ್ಧೆ, ಭಕ್ತಿ , ಧ್ಯಾನಯೋಗ – ಇವುಗಳೇ ಮುಮುಕ್ಷುವಿನ ಮುಕ್ತಿಗೆ ಕಾರಣಗಳೆಂದು ಶ್ರುತಿವಾಕ್ಯವು ಹೇಳುತ್ತದೆ. ಯಾರು ಅವುಗಳಲ್ಲಿ ನೆಲೆಗೊಂಡಿರುವನೋ ಅವನಿಗೆ ಅವಿದ್ಯೆಯಿಂದ ಕಲ್ಪಿತವಾಗಿರುವ ದೇಹಬಂಧನದಿಂದ ಬಿಡುಗಡೆಯಾಗುವುದು.

ಬುದ್ಧಿಶಾಲಿಯಾದವನು ಯಾವಾಗಲೂ ತನ್ನ ಆತ್ಮವನ್ನು ಕುರಿತೇ ಧ್ಯಾನಿಸಬೇಕು. ಅದು ಅದೃಶ್ಯವಾಗಿದ್ದರೂ ಏಕೈಕ ಸತ್ಯವಾಗಿದೆ. ಬಾಹ್ಯ ಜಗತ್ತಾಗಿ ಅದು ವ್ಯಕ್ತವಾಗಿದ್ದರೂ, ಅದರ ಸ್ವರೂಪವು ವ್ಯಕ್ತಿನಿಷ್ಠ ಚೈತನ್ಯಾತ್ಮಕವಾಗಿದೆ.

ಬ್ರಹ್ಮವು ಶಾಶ್ವತವಾಗಿರುವುದರಿಂದ ಅವಿದ್ಯೆಯ ನಾಶದಿಂದಲ್ಲದೆ ಬೇರೆ ಯಾವ ಸಾಧನದಿಂದಲೂ ಅದನ್ನು ಹೊಂದಲಾಗದು.

— ಶ್ರೀ ಶಂಕರಾಚಾರ್ಯ

# MORE THAN 20,000 OUTSTANDING STUDENTS. BE THE NEXT.

**AMRITA'S 6th campus, now in Chennai.**



**Puvanesh S**
**Final Year CSE**
Now placed at **Human Resocia Co. Japan**

---

## OUR RECRUITERS

ABB | Amazon | Bosch | Caterpillar | Cerner | Cisco | Cognizant | Dell | Directi | Ericsson | FireEye | Google | Honeywell | E&Y | IBM Infosys | Intuit | J.P. Morgan | Microsoft | Oracle | KLA Tencor | Quess | Renault Nissan | Micro Focus | National Instruments Samsung | SAP | Seagate | TCS | Rockwell Collins | Verizon | Titan | Toshiba | Volvo | Wipro | Zoho and many more

## HIGHLIGHTS

More than 200 companies visit Amrita for campus recruitment | 95% placements every year | 29.6 lakhs pa highest salary 5 lakhs pa average salary | 1 lakh pm highest internship stipend | Systematic life skills and technical training to make students industry ready | Tie-ups with 400+ companies for internship and to establish innovation labs | Entrepreneurship development opportunity through Amrita Technology Business | Incubator and Amrita Centre for Entrepreneurship Development Collaboration with 160+ international universities for Student Exchange Programmes | Higher Education | Dual Degree Programmes and one year internship abroad

LOCAL

| No. 1 Private University in India |

Young University Rankings 2018, Times Higher Education | QS Asia University Rankings 2018 | Asia University Rankings, Times Higher Education

| We are among the top 500 in the world |

For International Faculty, QS World Rankings | For International Outlook, World University Rankings, Times Higher Education

| We are 8th ranked university in the country as per NIRF ranking |

**B.TECH 2019**
**ADMISSIONS OPEN**
**APPLY NOW**

AMRITA VISHWA VIDYAPEETHAM | School of Engineering

**Admissions open | amrita.edu/Chennai | Call: 1800 425 90009**

AMRITAPURI | BENGALURU | CHENNAI | COIMBATORE | *AMARAVATI

*Proposed Campus





# Ramakrishna Math (A Branch of Belur Math)

South Nada, Opp. Ashoka Petrol Pump, Haripad - 690514 Dist. Alleppey, Kerala.
Phone: 0479-2411700,0974 5325 834. Email: srkmathharipad@gmail.com,
viveka.vira@gmail.com Website: www.rkmathharipad.org

## ಶ್ರೀರಾಮಕೃಷ್ಣರ ಮಠದ ಪುನರ್ನಿರ್ಮಾಣಕ್ಕಾಗಿ ಒಂದು ಮನವಿ



ಎರಡು ಕೊಠಡಿಗಳಿರುವ ಹಳೇ ಗೋಡೌನ್ (ಸಾಧುಗಳು ಈಗ ಇಲ್ಲಿಯೇ ತಂಗಿದ್ದಾರೆ)

ಪ್ರೀತಿಯ ಭಕ್ತರೆ, ಹಿತೈಷಿಗಳೆ ಮತ್ತು ಸ್ನೇಹಿತರೆ,

ಕೇರಳದ ಹರಿಪಾಡ್‌ನಲ್ಲಿರುವ ರಾಮಕೃಷ್ಣ ಮಠವನ್ನು ೧೯೧೨ರಲ್ಲಿ ಸ್ಥಾಪಿಸಲಾಯಿತು. ಶ್ರೀರಾಮಕೃಷ್ಣರ ನೇರಶಿಷ್ಯರೂ, ಅವರ ಮಾನಸಪುತ್ರರೂ ಆಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದಜಿಯವರು ನೆಲೆಸಿದ್ದ ಪವಿತ್ರಸ್ಥಾನವಿದು. ಹಲವು ವರ್ಷಗಳ ಕಾಲ ಬಳಸದೆ ಉಳಿದದ್ದರಿಂದ ಆಶ್ರಮದ ಕಟ್ಟಡಗಳು ಈಗ ಜೀರ್ಣಾವಸ್ಥೆಯಲ್ಲಿವೆ. ಮತ್ತೆ ಇದರ ಪುನರ್‌ನಿರ್ಮಾಣ ಕಾರ್ಯವನ್ನು ನಾವು ಕೈಗೊಂಡಿದ್ದು, ಮೊದಲ ಹಂತದಲ್ಲಿ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರ, ಸಮಾಜ ಕಲ್ಯಾಣ ಚಟುವಟಿಕೆಗಳಿಗಾಗಿ ಕೊಠಡಿಗಳು, ಸಂನ್ಯಾಸಿಗಳು ಮತ್ತು ಅತಿಥಿಗಳಿಗೆ ನಿವಾಸದ ಕೊಠಡಿಗಳು, ಕಛೇರಿ ಕಟ್ಟಡ, ಗ್ರಂಥಾಲಯ ಮತ್ತು ಉಚಿತ ವಾಚನಾಲಯ – ಇವುಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದೇವೆ. ಈ ಎಲ್ಲ ಕಟ್ಟಡಗಳನ್ನೂ ಸಂಪೂರ್ಣವಾಗಿ ನವೀಕರಿಸಬೇಕಾಗಿದೆ.



ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳು

**ಈ ಯೋಜನೆಗೆ ಸುಮಾರು 9 ಕೋಟಿ ರೂಪಾಯಿ ವೆಚ್ಚ ತಗಲಬಹುದಾಗಿದೆ.**

ಉದಾರ ಹೃದಯಿಗಳಾದ ಎಲ್ಲ ದಾನಿಗಳು, ಅದರಲ್ಲೂ ಶ್ರೀರಾಮಕೃಷ್ಣರ ಭಕ್ತರು ಮುಂದೆ ಬಂದು ಶ್ರೀರಾಮಕೃಷ್ಣರ ಈ ಧಾಮವನ್ನು ನಿರ್ಮಿಸಲು ಮತ್ತು ಆ ಮೂಲಕ ಮಾನವ ಜನಾಂಗದ ಸೇವೆಯನ್ನು ಸಲ್ಲಿಸಲು ದೇಣಿಗೆಗಳನ್ನು ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ. ಈ ಸೇವಾಯಜ್ಞದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಆಶೀರ್ವಾದಗಳಿಗೆ ಖಂಡಿತವಾಗಿಯೂ ಪಾತ್ರರಾಗುತ್ತಾರೆ ಎಂಬುದು ನಮ್ಮ ನಂಬಿಕೆ.

ಇತಿ ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ವೀರಭದ್ರಾನಂದ, ಅಧ್ಯಕ್ಷರು




೧೯೧೨ರ ಶಂಕುಸ್ಥಾಪನೆ ಶಿಲಾಫಲಕ

**ದೇಣಿಗೆಗಳನ್ನು ಕಳುಹಿಸುವುದಕ್ಕೆ ಅಗತ್ಯವಾದ ವಿವರಗಳು**

1) ದೇಣಿಗೆ – ಭಾರತದಲ್ಲಿ : 1) Go to-www.onlinesbi.com > Then Select- SBI Collect> State- Kerala >Institutions -Charitable Institutions >Ramakrishna Math Haripad.

2) ಚೆಕ್, ಡಿ.ಡಿ.ಗಳನ್ನು "Ramakrishna Math, Haripad" ಈ ಹೆಸರಿಗೆ ಕಳುಹಿಸಿ ಕೊಡಬೇಕು.

3) NEFT Transfer : AC Number : 30642551603, : State Bank of India. Haripad. RTGS/NEFT/IFSC code : SBIN0010596.

(ಒಂದು ವೇಳೆ NEFT ವರ್ಗಾವಣೆ ಮಾಡುವುದಾಗಿದ್ದರೆ, ದಯವಿಟ್ಟು ಇ-ಮೇಲ್ ಮೂಲಕ ನಿಮ್ಮ ಹೆಸರು, ಕಳುಹಿಸಿದ ಮೊತ್ತ, ಅಂಚೆ ವಿಳಾಸ, PAN ಸಂಖ್ಯೆ, ಫೋನ್ ಸಂಖ್ಯೆ ಹಾಗೂ ವರ್ಗಾವಣೆಯ ವಿವರಗಳನ್ನು ಈ ವಿಳಾಸಕ್ಕೆ ತಿಳಿಸಬೇಕು: srkmathharipad@gamil.com)

★ Donations from Foreign countries: Kindly draw a Cheque/ Draft in favour of "Ramakrishna Math" and send it to the General Secretary, Ramakrishna Math, Belur Math, Dt. Howrah (West Bengal), Pin -711 202, India. In the covering letter mention that it is a donation for Haripad Centre building fund. And inform all the details of the donation to e-mail: srkmathharipad@gmail.com, viveka.vira@gmail.com

**ರಾಮಕೃಷ್ಣ ಮಠಕ್ಕೆ ನೀಡುವ ದೇಣಿಗೆಗಳಿಗೆ ಸೆಕ್ಷನ್ 80G ಪ್ರಕಾರ, ಆದಾಯ ತೆರಿಗೆ ವಿನಾಯಿತಿ ಅನ್ವಯವಾಗುತ್ತದೆ.**